ದಿನಾಂಕಃ 05.02.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ

2016 ರಲ್ಲಿ ನನ್ನ ಮದುವೆ ಯಾಗಿರುತ್ತದೆ. ನನ್ನ ಗಂಡನ ಊರು ಯಾದಗಿರಿಯಾಗಿರುತ್ತದೆ. ನಿಮ್ಮ ಗಂಡನ ಜೊತೆಗೆ ನೀವು ಯಾದಗಿರಿಯಲ್ಲಿರುತ್ತೀರಿ ಎಂದರೆ ಸಾಕ್ಷಿ ಚಿತ್ರದುರ್ಗದಲ್ಲಿ ಇರುತ್ತೇವೆ ಎನ್ನುತ್ತಾರೆ. ನಾನು ಕಾಯಂ ಆಗಿ ನನ್ನ ಗಂಡನ ಜೊತೆಗೆ ವಾಸವಿರುತ್ತೇನೆ ಎಂದರೆ ಸರಿ, ನನ್ನ ಗಂಡ ಬ್ಯಾಂಕ್ ನೌಕರರಾಗಿದ್ದು ಮೂರು ವರ್ಷಕ್ಕೆ ಒಮ್ಮೆ ಅವರಿಗೆ ವರ್ಗಾವಣೆ ಆಗುತ್ತದೆ. ದಿಃ 25.08.2023 ರಂದು ನನ್ನ ತಂದೆ ಮೃತಪಟ್ಟಿರುತ್ತಾರೆ. ನನ್ನ ತಂದೆ ಮತ್ತು 1 ನೇ ಪ್ರತಿವಾದಿ 7 ನೇ ತರಗತಿಯಿಂದ ಜೊತೆಯಲ್ಲಿಯೇ ಓದುತ್ತಿದ್ದರು ಎಂದರೆ ಸರಿಯಲ್ಲ. ಅವರು ಇಬ್ಬರು ಅನ್ಯೋನ್ಯವಾಗಿ ಇದ್ದರು ಎಂದರೆ ಸರಿಯಲ್ಲ. ಅವರು ಈ ರೀತಿ ಇದ್ದ ಕಾರಣ 1 ನೇ ಪ್ರತಿವಾದಿ ಏನು ವ್ಯವಹಾರ ಮಾಡಬೇಕಾದರೂ ನನ್ನ ತಂದೆಯವರನ್ನು ಕರೆದುಕೊಂಡು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅದೇರೀತಿ 1 ನೇ ಪ್ರತಿವಾದಿಯವರು ಅವರ ಮಕ್ಕಳ ಮದುವೆ ಮಾಡುವಾಗ ನನ್ನ ತಂದೆಯವರನ್ನು ಹಿರಿಯರನ್ನಾಗಿ ಮಾಡಿದ್ದರು ಎಂದರೆ ಸರಿಯಲ್ಲ. ಆದಕಾರಣ 1 ನೇ ಪ್ರತಿವಾದಿಗೆ ನನ್ನ ತಂದೆಯವರ ಮೇಲೆ ಬಹಳ ವಿಶ್ವಾಸ ಇತ್ತು ಎಂದರೆ ಸರಿಯಲ್ಲ.

2. 2017 ರಲ್ಲಿ 1 ನೇ ಪ್ರತಿವಾದಿಯ ಮಕ್ಕಳ ಮದುವೆಗೆ ಹಣದ ಅವಶ್ಯಕತೆ ಇದ್ದ ಕಾರಣ ನಿಮ್ಮ ತಂದೆಯವರಿಂದ ಅವರು 5 ಲಕ್ಷ ಹಣವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ಹೊಲದ ವ್ಯವಹಾರಕ್ಕಾಗಿ ಪಡೆದುಕೊಂಡಿದ್ದರು ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ಖರೀದಿ ಮಾಡುವ ಸಂಭಂದ 1 ನೇ ಪ್ರತಿವಾದಿ ಯಾವತ್ತೂ ಸಹ ನನ್ನ ತಂದೆಯವರ ಜೊತೆಗೆ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆಯವರಿಂದ ಪಡೆದ 5 ಲಕ್ಷ ಹಣದ ಭದ್ರತೆಗಾಗಿ ಎಂದು ಕರಾರುಪತ್ರವನ್ನು ಬರೆಸಿಕೊಂಡಿದ್ದಾರೆ ಎಂದರೆ ಸಾಕ್ಷಿ ಹೊಲದ ವ್ಯವಹಾರಕ್ಕಾಗಿ ಕರಾರುಪತ್ರ ಬರೆಸಿಕೊಂಡಿದ್ದಾರೆ, 5 ಲಕ್ಷದ ಭದ್ರತೆಗಾಗಿ ಅಲ್ಲ ಎನ್ನುತ್ತಾರೆ. 2016 ರಲ್ಲಿ ನಾನು ನನ್ನ

ಗಂಡನ ಜೊತೆಯಲ್ಲಿ ಬೇರೆಯ ಕಡೆ ವಾಸವಿರುವುದರಿಂದ ಈ ಕರಾರಿನ ವ್ಯವಹಾರದ ಬಗ್ಗೆ ನನಗೆ ಏನೂ ಗೊತ್ತಿಲ್ಲ ಎಂದರೆ ಸರಿಯಲ್ಲ. ಈ ಕೇಸಿಗೆ ಅನುಕೂಲವಾಗಲಿ ಎಂದು ನಾನು 1 ನೇ ಪ್ರತಿವಾದಿ ಜಮೀನಿನ ಮಾರಾಟಕ್ಕಾಗಿ ಕರಾರುಪತ್ರ ಬರೆದುಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ತಂದೆಯಿಂದ 1 ನೇ ಪ್ರತಿವಾದಿ ಪಡೆದುಕೊಂಡಿದ್ದ 5 ಲಕ್ಷ ಹಣವನ್ನು ನನ್ನ ತಂದೆಗೆ ಹಿಂದಿರುಗಿಸಿದ್ದಾರೆ ಎಂದರೆ ಸರಿಯಲ್ಲ. ಅವರು ಹಣವನ್ನು ಹಿಂದಿರುಗಿಸುವಾಗ ನೀವು ಮನೆಯಲ್ಲಿ ಇಲ್ಲದಿದ್ದ ಕಾರಣ ಆ ರೀತಿ ಹಿಂದಿರುಗಿಸಿರುವ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ 5 ಲಕ್ಷ ಹಣವನ್ನು ಅವರು ಕೊಟ್ಟಿರುವುದಿಲ್ಲ ಎನ್ನುತ್ತಾರೆ. 2019 ರಲ್ಲಿ 5 ಲಕ್ಷ ಹಣ ಹಿಂದಿರುಗಿಸಿದ್ದ ಕಾರಣ ಕರಾರು ರದ್ದತಿ ಪತ್ರ ಬರೆಸಿಕೊಳ್ಳಲು ನನ್ನ ತಂದೆಯವರ ಬಳಿ 1 ನೇ ಪ್ರತಿವಾದಿ ಬಂದಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 5 ಲಕ್ಷ ಹಿಂದಿರುಗಿಸಿ ಕರಾರು ರದ್ದತಿ ಪತ್ರಕ್ಕೆ ಸಹಿ ಮಾಡಿದ್ದಾರೆ ಆದರೆ ಈ ದಾವೆಯ ಕರಾರುಪತ್ರಕ್ಕೆ ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಅವರ ಜಮೀನನ್ನು ಅಡಮಾನ ಮಾಡಿ ಕೊನ್ನುರು ಬ್ಯಾಂಕ್‌ನಲ್ಲಿ ಸಾಲ ಪಡೆದು ನೀರಾವರಿ ವ್ಯವಸ್ಥೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅವರು ಈ ರೀತಿ ಮಾಡಿಕೊಂಡಿದ್ದು, ಕಬ್ಬು, ಅರಿಶಿನ ಮತ್ತು ಇತ್ಯಾದಿ ಬೆಳೆಗಳನ್ನು ಬೆಳೆದು ಆದಾಯ ಮಾಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಪ್ರತಿವರ್ಷ 500 ರಿಂದ 600 ಟನ್ ಕಬ್‌ನ್ನು ಸಕ್ಕರೆ ಕಾರ್ಖಾನೆಗೆ ಮಾರಾಟ ಮಾಡತ್ತಿದ್ದಾರೆ ಎಂದರೆ ಸರಿಯಲ್ಲ.

4. ಪ್ರತಿವಾದಿಗಳಿಗೆ ಅವರ ಜಮೀನುಗಳಿಂದ ಹೆಚ್ಚು ಆದಾಯ ಬರುತ್ತಿರುವುದರಿಂದ ಅವರಿಗೆ ಜಮೀನು ಮಾರಾಟ ಮಾಡುವ ಸಂದರ್ಭ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ಅವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದು, ಅವರು ಯಾವತ್ತೂ ಸಹ ನನ್ನ ತಂದೆಯವರ ಬಳಿ ಮಾರಾಟ ಮಾಡಲು ಬಂದಿರುವುದಿಲ್ಲ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮಕ್ಕಳಗೇರಿಯ ಎಲ್ಲಾ ಜಮೀನುಗಳೆಲ್ಲಾ ನೀರಾವರಿ ಜಮೀನುಗಳಾಗಿರುತ್ತವೆ ಎಂದರೆ ಸಾಕ್ಷಿ ದಾವಾ ಸ್ವತ್ತು ನೀರಾವರಿ ಅಲ್ಲ

ಎನ್ನುತ್ತಾರೆ. ಮಕ್ಕಳಗೇರಿಯಲ್ಲಿ ಎಲ್ಲಾ ಜಮೀನುಗಳು ನೀರಾವರಿ ಜಮೀನುಗಳು ಆಗಿರುವುದರಿಂದ, ಕಬ್ಬು, ಬಾಳೆ, ಅರಿಶಿನವನ್ನು ಬೆಳೆಯುತ್ತಿರುವುದರಿಂದ ಅಲ್ಲಿಯ ಜಮೀನುಗಳ ಮಾರುಕಟ್ಟೆಯ ಬೆಲೆ ಪ್ರತಿ ಎಕರೆಗೆ 40-50 ಲಕ್ಷ ಇದೆ ಎಂದರೆ ಸರಿಯಲ್ಲ. ನಿಮ್ಮ ತಂದೆಯವರು 3 ಎಕರೆ 10 ಗುಂಟೆಯನ್ನು ಒಟ್ಟು 16 ಲಕ್ಷ ಕಡಿಮೆ ಮೌಲ್ಯಕ್ಕೆ ಸುಳ್ಳು ಕರಾರುಪತ್ರ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ಆಗ ಅಷ್ಟೆ ಬೆಲೆ ಇತ್ತು ಎನ್ನುತ್ತಾರೆ.

5. ಪ್ರತಿವಾದಿಯವರಿಗೆ ನಮ್ಮ ವಕೀಲರಿಂದ ನೋಟಿಸ್ ಜಾರಿಯಾದಾಗ ಮೊದಲ ಬಾರಿಗೆ ಈ ರೀತಿ ಸುಳ್ಳು ಖರೀದಿ ಕರಾರುಪತ್ರ ಮಾಡಿಕೊಂಡಿರುವ ಹಾಗೂ ಅವರು ಸಹಿಗಳನ್ನು ಮಾಡಿರುವ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ. ನೋಟಿಸ್ ಜಾರಿಯಾದ ತಕ್ಷಣ ನನ್ನ ತಾಯಿಯವರನ್ನು ಗೋಕಾಕ್‌ನಲ್ಲಿ ಅವರು ಬೇಟಿ ಮಾಡಿ ನಾವು ರದ್ದತಿಪತ್ರಕ್ಕೆ ಎಂದು ಸಹಿ ಮಾಡಿದ್ದೇವೆ, ನೀವು ಸುಳ್ಳು ಕರಾರುಪತ್ರವನ್ನು ಸೃಷ್ಟಿ ಮಾಡಿದ್ದೀರಿ ಅದನ್ನು ರದ್ದು ಮಾಡಿಕೊಡಿ ಎಂದು ಕೇಳಿದರು ಎಂದರೆ ಸರಿಯಲ್ಲ. ನನ್ನ ತಂದೆಯವರು 1 ನೇ ಪ್ರತಿವಾದಿಯವರನ್ನು ಪುಸಲಾಯಿಸಿ ಸುಳ್ಳು ಕರಾರುಪತ್ರ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿಃ20.07.2022 ರಂದು ನಾವು ಕೊಟ್ಟ ನೋಟಿಸ್‌ಗೆ ಪ್ರತ್ಯುತ್ತರ ನೋಟಿಸ್ ಕೊಟ್ಟಿರುತ್ತಾರೆ ಎಂದರೆ ಸರಿ. ಕರಾರುಪತ್ರದ ಪೇಪರ್ ನ್ನು ವಿಠ್ಠಲ್‌ರವರು ತಂದಿದ್ದರು. ಇದರ ಮೇಲೆ ಕೊಡುವವರು ಮತ್ತು ತೆಗೆದುಕೊಳ್ಳುವವರ ಹೆಸರುಗಳು ಇದ್ದವು. ಕರಾರುಪತ್ರವನ್ನು ಪತ್ರಬರಹಗಾರರು ಬರೆದಿರುತ್ತಾರೆ. ಗೋಕಾಕ್‌ನ ಹಿರೆಮಟ್ ಪತ್ರಬರಹಗಾರರು ಆಗಿರುತ್ತಾರೆ. ಕರಾರುಪತ್ರವನ್ನು ಬರೆಯಲು ವಿಠ್ಠಲ್‌ರವರು ಮಾಹಿತಿಯನ್ನು ಕೊಟ್ಟಿರುತ್ತಾರೆ. ಆ ದಿವಸ ಇಬ್ಬರು ಸಾಕ್ಷಿದಾರರು ಇದ್ದರು, ಅವರು ದೇವಲಾಪೂರ ಮತ್ತು ಮುತ್ತೆನ್ನವರ ಆಗಿರುತ್ತಾರೆ. ಅವರನ್ನು ವಿಠ್ಠಲ್ ಸನದಿರವರೇ ಕರೆದುಕೊಂಡು ಬಂದಿದ್ದರು.

6. ಸದರಿ ಸಾಕ್ಷಿದಾರರನ್ನು ಬಿಟ್ಟು ನಮ್ಮ ಮನೆಯವರೆಲ್ಲಾ ಇದ್ದೆವು ಮತ್ತು ವಿಠ್ಠಲ್ ರವರ ಮೂರು ಜನ ಮಕ್ಕಳು ಇದ್ದರು. ನನ್ನ ತಂದೆ ಮತ್ತು ಸಾಕ್ಷಿದಾರರು ಸೇರಿಕೊಂಡು

ಪ್ರತಿವಾದಿಯ ಜಮೀನನ್ನು ಹೊಡೆದುಕೊಳ್ಳಬೇಕೆಂದು ಸುಳ್ಳು ಕರಾರು ಸೃಷ್ಟಿ ಮಾಡಿ, ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಯಾವುದೇ ವಿಚಾರಗೊತ್ತಾಗದ ಹಾಗೆ ರದ್ದತಿ ಪತ್ರಕ್ಕೆ ಸಹಿ ಮಾಡಿ ಎಂದು ಹೇಳಿ ಖರೀದಿ ಕರಾರುಪತ್ರಕ್ಕೆ ಸಹಿಗಳನ್ನು ಮಾಡಿಸಿಕೊಂಡು ಅದನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಖರೀದಿ ಕರಾರುಪತ್ರವಾದ ದಿವಸವೇ ಕ್ರಯಪತ್ರವನ್ನು ಮಾಡಿಸಿಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಜಮೀನಿನ ಮೇಲೆ ಸಾಲವಿತ್ತು, ಅದನ್ನು ತೀರಿಸಿದ ನಂತರ ಮಾಡಿಕೊಡುತ್ತೇವೆ ಎಂದು ಹೇಳಿದ್ದು, ಮಾಡಿಕೊಡಲಿಲ್ಲ ಎನ್ನುತ್ತಾರೆ. ಪ್ರತಿವಾದಿಯವರು ಕೊನ್ನುರಿನ ಕೇನರಾ ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಂಡಿದ್ದರು. ಕೈಗಡ ಸಾಲವನ್ನು ಯಾರಿಂದ ಎಷ್ಟು ತೆಗೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ, ತೆಗೆದುಕೊಂಡಿರಬಹುದು. ಯಾವ ಬ್ಯಾಂಕ್‌ನಲ್ಲಿ ಎಷ್ಟು ಸಾಲ ಪಡೆದುಕೊಂಡಿದ್ದಾರೆ ಎಂದು ವಿಚಾರ ಮಾಡಿದ್ದೀರಾ ಎಂದರೆ ಸಾಕ್ಷಿ ಕೇನರಾ ಬ್ಯಾಂಕ್‌ನಲ್ಲಿ ಸಾಲ ಇರುತ್ತದೆ ಎನ್ನುತ್ತಾರೆ. ಪ್ರತಿವಾದಿಗಳು ಯಾರ ಹತ್ತಿರವೂ ಸಾಲ ಮಾಡಿರುವುದಿಲ್ಲ, ಅವರ ಆದಾಯ ಚೆನ್ನಾಗಿದ್ದು, ನೀವು ಸೃಷ್ಟಿ ಮಾಡಿ ಕ್ರಯದ ಕರಾರನ್ನು ಹಾಜರು ಪಡಿಸಿರುತ್ತೀರಿ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ